# ಸೈತಾನನ ಕೊಂಡಿ

ಸಂಗ್ರಹ : ಸುನಯನ ವಾಲ್ಟರ್ಸ್

**ಡ್ಯಾ**ನಿ ಎಂಡರ್ಸನ್ ಬಾಲಕನಾಗಿದ್ದಾಗ ಅವನಿಗೆ ತನ್ನ ತಂದೆಯೊಂದಿಗೆ ರ್‍ಯಾಟೆಲ್ ಹಾವು (Rattle Snake)ಗಳನ್ನು ಬೇಟೆಯಾಡಿ ಹಿಡಿಯಲು ಹೋಗುವ ಅವಕಾಶವಿತ್ತು. ತಂದೆಯು ಡ್ಯಾನಿಗೆ ಎಚ್ಚರಿಕೆ ನೀಡಿದ್ದರು. ಆ ಹಾವುಗಳನ್ನು ಎಂದೂ ಮುಟ್ಟಬಾರದು! ಆ ಜಾತಿಯ ಹಾವುಗಳು ತಮ್ಮ ಮುಂದೆ ಚಲನೆ ಗುರುತಿಸಿದರೆ ಕಚ್ಚುವ ಸಾಧ್ಯತೆ ಇರುವುದರಿಂದ ಇದು ಅಗತ್ಯದ ಎಚ್ಚರಿಕೆಯಾಗಿತ್ತು. ಆ ಜಾಗದಲ್ಲಿದ್ದ ರ್‍ಯಾಟೆಲ್ ಹಾವುಗಳು ಮರಣಾಂತಿಕ ವಿಷಪೂರಿತವಾಗಿದ್ದುವು.

ಡ್ಯಾನಿಗೆ ಈಗ 53 ವರುಷ. ಅವರ ತೋಟದಲ್ಲಿ ಹೆಚ್ಚಾಗಿ ವಿಷವಿಲ್ಲದ ಜಾತಿಯ ದೊಡ್ಡ ಹಾವುಗಳು ಕಣ್ಣಿಗೆ ಬೀಳುವುದಿತ್ತು. ಅವುಗಳು ಇಲಿಗಳನ್ನು ಹಿಡಿಯುತ್ತಿದ್ದರಿಂದ ಬೆಳೆನಾಶವಾಗದಂತೆ ಸಹಾಯಕವಾಗಿದ್ದವು. ಆ ತೋಟದ ಒಡೆತನ ಪಡೆದ ಕಳೆದ 5 ವರುಷಗಳಲ್ಲಿ ಎಂದೂ ಅಲ್ಲಿ ವಿಷಪೂರಿತ ಹಾವುಗಳು ಕಂಡು ಬಂದಿರಲಿಲ್ಲ.

ಒಂದು ಸೋಮವಾರದ ಸಾಯಂಕಾಲ ಹೊತ್ತಿನಲ್ಲಿ ಡ್ಯಾನಿ ಮತ್ತು ಅವರ ಮಗನು ಲಾಯದಲ್ಲಿ ಕುದುರೆಗಳಿಗೆ ಮೇವು ಹಾಕುತ್ತಿದ್ದಾಗ, 5 ಅಡಿ ಉದ್ದದ ರ್‍ಯಾಟೆಲ್ ಹಾವು ಅವರು ಕೆಲಸ ಮಾಡುತ್ತಿದ್ದಲ್ಲಿಗೆ ಹರಿದು ಬಂತು. ಕೂಡಲೇ ಎಚ್ಚೆತ್ತ ಅವರ ಮಗನು ಒಂದು ನೀರು ಹಾಯಿಸುವ ಕೊಳವೆಯಿಂದ ಅದನ್ನು ಒತ್ತಿಹಿಡಿದಾಗ, ಡ್ಯಾನಿಯು ಒಂದು ಹಾರೆಯಿಂದ ಅದರ ತಲೆಯನ್ನು ಕಡಿದು ಬೇರ್ಪಡಿಸಿದರು. ಆಗಲೇ ಡ್ಯಾನಿಯ ತಲೆಯಲ್ಲಿ ಒಂದು ತಪ್ಪಾದ ಯೋಚನೆ ಬಂತು. ಈ ಹಾವಿನ ತಲೆಯು ಒಂದು ಉತ್ತಮ ಸ್ಮರಣಿಕೆಯಾಗಬಹುದಲ್ಲವೇ?

ಮನುಷ್ಯನಿಗೆ ಮಾರಣಾಂತಿಕ ವೈರಿಯಾದ ಸೈತಾನನನ್ನು ಇದು ನೆನಪಿಸುತ್ತದೆ. ಕ್ರಿಸ್ತನ ಶಿಲುಬೆಯ ಮರಣದಿಂದ ಸೈತಾನನ ದಮನವಾಯಿತು. ಅವನು ಸೋಲಿಸಲ್ಪಟ್ಟು ದಬ್ಬಲ್ಪಟ್ಟನು. ಅವನ ಶ್ರೇಷ್ಠ ಆಯುಧವಾದ ಮರಣವು ಕೂಡಾ ಅವನಿಂದ ತೆಗೆಯಲ್ಪಟ್ಟಿತು. 1 ಕೊರಿಂಥ 15:54ರಲ್ಲಿ ಹೇಳಿದಂತೆ ಆತನು ಸತ್ತವರೊಳಗಿಂದ ಎದ್ದು ಬಂದಾಗ, – *"ಮರಣವು ನುಂಗಿಯೇ ಹೋಯಿತು, ಜಯವಾಯಿತು."* ಹೀಗಿದ್ದರೂ ಸೈತಾನನ ಬಲವನ್ನು ನಿಕೃಷ್ಟವೆಂದು ಕಡೆಗಣಿಸುವಂತಿಲ್ಲ. ಅವನು ಬುದ್ಧಿವಂತನಾದ ವೈರಿಯಾಗಿದ್ದಾನೆ! ದೇವರ ಮೇಲಿನ ವಿಶ್ವಾಸ ಮತ್ತು ವಿಧೇಯತೆಯಿಂದ ಕ್ರೈಸ್ತರನ್ನು ದಾರಿ ತಪ್ಪಿಸಲು ಅವನು ಗರ್ಜಿಸುವ ಸಿಂಹದೋಪಾದಿಯಲ್ಲಿ ವರ್ತಿಸುತ್ತಾನೆ. ಅವನ ವಿಷದ ಕುರಿತಾದ ಎಚ್ಚರಿಕೆಯನ್ನು ನೆನಪಿನಲ್ಲಿಟ್ಟುಕೊಂಡು, ದೇವರ ವಾಕ್ಯದ ಆಧಾರದಿಂದ ಪರಿಹಾರವನ್ನು ಕಂಡುಕೊಂಡು ನಾವು ಎಚ್ಚರದಿಂದಿರಬೇಕು. *"ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ, ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ"* (1 ಪೇತ್ರ 5:8).

ಆದರೆ ಡ್ಯಾನಿಗೆ ತನ್ನ ತಂದೆಯ ಎಚ್ಚರಿಕೆಯ ನೆನಪಿರಲಿಲ್ಲ. ಆ ರ್‍ಯಾಟೆಲ್ ಹಾವಿನ ತಲೆಯನ್ನು ಎತ್ತಿಕೊಳ್ಳಲು ಬಗ್ಗಿದಾಗ, ಆ ತಲೆಯು ಫಕ್ಕನೆ ಚಲಿಸಿ, ಅವರ ಕೈಬೆರಳನ್ನು ಕಚ್ಚಿತು! ಕೈಯನ್ನು ಬಲವಾಗಿ ಕೊಡವಿ ಅದರ ಹಿಡಿತದಿಂದ ಬಿಡಿಸಿಕೊಳ್ಳಬೇಕಾಯಿತು. ತಾಪ ಮತ್ತು ಸ್ಪರ್ಶದ ಗುರುತಿಸುವಿಕೆಯು ಇಂತಹ ಹಾವುಗಳಲ್ಲಿ ಸತ್ತ ಮೇಲೂ ಸ್ವಲ್ಪ ಹೊತ್ತು ಸಚೇತನವಾಗಿರುವುದೆಂದು ಹೇಳಲ್ಪಟ್ಟಿದೆ.

ಸಣ್ಣ ಗಾಯವೆಂದು ಡ್ಯಾನಿಯು ಕಡೆಗಣಿಸುತ್ತಿದ್ದರೇನೋ. ಆದರೆ ಪತ್ನಿಯು ವೈದ್ಯರಲ್ಲಿಗೆ ಕರೆದೊಯ್ದರು. ಹತ್ತು ನಿಮಿಷದೊಳಗೇ ಅವರ ನಾಲಿಗೆಯು ದಪ್ಪವೇರಿ, ವಿಷದ ಏರುವಿಕೆಯ ಅನುಭವವಾಗತೊಡಗಿತ್ತು. ಸರಿಯಾದ ವೈದ್ಯಕೀಯ ಸೌಲಭ್ಯ ದೊರೆತು ಪೂರ್ಣ ಪ್ರಮಾಣದ ವಿಷಹಾರಕ ಚುಚ್ಚುಮದ್ದುಗಳ ಪ್ರಯೋಗದ ಮೂಲಕ ಎರಡು

ದಿನದ ಮೇಲೆ ಚೇತರಿಸಿಕೊಂಡು ಅವರು ಮನೆಗೆ ಹಿಂದಿರುಗಿದರು.

ಸೈತಾನನ ಅಧಿಕಾರವಿರುವ ಜಾಗಗಳಿಗೆ ಹೋಗುವುದು ಅಪಾಯ ರಹಿತ ವಿನೋದವಾಗಿದೆ ಎಂದು ಜನರು ತಿಳಿದುಕೊಳ್ಳುತ್ತಾರೆ. ಆಹ್ವಾನಿಸುವಂತಿರುವ ಈ ವಿಷಯಗಳಲ್ಲಿ ಅವನ ವಿಷವು ಹಬ್ಬಿರುತ್ತದೆ. ಪಾಪಪೂರಿತವಾದ ಪುಸ್ತಕಗಳು, ಆಟಗಳು, ಮನೋರಂಜನೆಗಳು... ಅಲ್ಲಿಂದ ದೂರಸರಿದು ಕೂಡಲೇ ದಿವ್ಯ ವೈದ್ಯನಲ್ಲಿಗೆ ಹೋಗಿರಿ. ಏಕೆಂದರೆ ಆ ಮನೋರಂಜನೆಗಳಲ್ಲಿ ವಿಷಪೂರಿತವಾದ ಸೈತಾನನ ಕೊಂಡಿಯು ಅಡಗಿರುತ್ತದೆ! ವೈದ್ಯನಾದ ಪ್ರಭು ಯೇಸುವು ಸೈತಾನನನ್ನು ಎದುರಿಸಿ, ನಿರ್ಬಂಧಿಸುವ ರೀತಿಯನ್ನು ತನ್ನ ವಾಕ್ಯದ ಮೂಲಕ ನಮಗೆ ಒದಗಿಸಿಕೊಟ್ಟಿದ್ದಾನೆ. ಲೂಕ 4:1–13ರಲ್ಲಿ "ಬರೆದಿದೆ" ಎಂದು ಎಷ್ಟುಬಾರಿ ಹೇಳಲ್ಪಟ್ಟಿದೆ? ಯೇಸುವು ತಾನೇ ವಾಕ್ಯದ ಬಲದಿಂದ ಸೈತಾನನನ್ನು ಎದುರಿಸಿದನಲ್ಲವೆ?

ತಾನು ಮುಂದಿನ ಬಾರಿ ಇಂಥ ಹಾವನ್ನು ಕಂಡರೆ ಅದನ್ನು ಕೊಂದು ಹುಗಿದುಬಿಡುತ್ತೇನೆಂದು ಡ್ಯಾನಿಯು ಹೇಳುತ್ತಾರೆ! ನಾವು ಪಾಪವು ಎದುರಾದಾಗ, ಜ್ಞಾನೋಕ್ತಿ 4:14–15ರಲ್ಲಿ ಹೇಳಿದಂತೆ ನಡೆಯಬೇಕು.

*"ದುಷ್ಟರ ಮಾರ್ಗದಲ್ಲಿ ಸೇರದಿರು; ಕೆಟ್ಟವರ ದಾರಿಯಲ್ಲಿ ನಡೆಯಬೇಡ. ಅದಕ್ಕೆ ದೂರವಾಗಿರು. ಅದರಲ್ಲಿ ನಡೆಯದೆ ಓರೆಯಾಗು, ಮುಂದೆ ಮುಂದೆ ನಡೆ."* ■